ಕ್ರಾಂತಿಯಕಿಡಿ
ಕಾಯಕಯೋಗಿ
KAYAKAYOGI-MORNING DAILY ಕನ್ನಡ ದಿನಪತ್ರಿಕೆ
ಪುಟ-04
ಭಾನುವಾರ
18 ಜುಲೈ 2021

ಮಳವಳ್ಳಿ ಪಟ್ಟಣದ ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ಕೃಷಿ ಇಲಾಖೆ ವಯಿತಿಂದ ಹಮ್ಮಿಕೊಂಡಿರುವ ಕೃಷಿ ಅಭಿಯಾನ ಕಾರ್ಯಕ್ರಮದಲ್ಲಿ ಶಾಸಕ ಡಾ. ಕೆ.ಅನ್ನದಾನಿ ಪ್ರಚಾರದ ಬಿತ್ತಿಪತ್ರವನ್ನು ಬಿಡುಗಡೆಗೊಳಿಸಿದರು.

ಪಾಂಡವಪುರ ಪಟ್ಟಣದ ಕಸಬಾ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷ ಹಾರೋಹಳ್ಳಿ ಎಚ್.ಸಿ.ಮಹೇಶ್ ಅವರು ಪ್ರಭಾರ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಅವರನ್ನು ಶಾಸಕ ಸಿ.ಎಸ್.ಪುಟ್ಟರಾಜು ಸನ್ಮಾನಿಸಿ ಅಭಿನಂದಿಸಿದರು.

ಆರೋಗ್ಯದಿಂದಿರಿ-ಸುರಕ್ಷಿತವಾಗಿರಿ, ನಾವೆಲ್ಲೂರು ಒಟ್ಟಾಗಿ ಕೊರೋನಾ ವಿರುದ್ಧ ಹೋರಾಡೋಣ.

ಕಾಯಕಯೋಗಿ ಮಾಸ್ಕ್ ಅಭಿಯಾನ

ಇಡೀ ವಿಶ್ವವನ್ನೇ ಬೆಚ್ಚಿಬೀಳಿಸಿರುವ ಮಹಾಮಾರಿ ಕೊರೋನಾ ತಡೆಗಟ್ಟುವುದು ಇಂದಿನ ಜರೂರು ಪರಿಸ್ಥಿತಿ.
ಪ್ರತಿಯೊಬ್ಬರು ಕಡ್ಡಾಯವಾಗಿ ಮಾಸ್ಕ್ ಧರಿಸಿ ಸೆಲ್ಫಿ ಕಳಿಸಿ ಮಾಸ್ಕ್ ತೊಟ್ಟ ನಿಮ್ಮ ಭಾವಚಿತ್ರವನ್ನು ಕಾಯಕಯೋಗಿ ಪ್ರಕಟಿಸಲಿದೆ.
ಬಿ.ಕೆ.ಅರುಣಜ್ಯೋತಿ, ಸಂಪಾದಕಿ
ಕಾಯಕಯೋಗಿ ದಿನಪತ್ರಿಕೆ,
ಮಂಡ್ಯ, ಮೊ:9980605484

ಸರ್ಕಾರದ ನಿಯಮಾವಳಿ ಪಾಲಿಸೋಣ
ಮಹಾಮಾರಿ ಕರೋನಾ ಓಡಿಸೋಣ

ಕಾಯಕಯೋಗಿ ಕಾಳಜಿ

ಪರಿಸರ ಸಂರಕ್ಷಣೆ ಸರ್ವರ ಹೊಣೆ

ಸಸಿ ನೆಡೋಣ-ಕರೋನಾ ಓಡಿಸೋಣ

ಇಡೀ ವಿಶ್ವವನ್ನೇ ತಲ್ಲಣಗೊಳಿಸಿರುವ ಮಹಾಮಾರಿ ಕರೋನಾ ಸೋಂಕಿನಿಂದ ಪ್ರತಿನಿತ್ಯ ಸಾವಿರಾರು ಸಾವು-ನೋವುಗಳು ಸಂಭವಿಸುತ್ತಿವೆ. ಸ್ವಾರ್ಥಕ್ಕಾಗಿ ಪರಿಸರ ನಾಶ ಮಾಡಿದ ಪರಿಣಾಮ ಆಕ್ಸಿಜನ್ ಕೊರತೆ ಮನುಷ್ಯನನ್ನು ಉಸಿರುಗಟ್ಟಿ ಸಾಯುವಂತೆ ಮಾಡಿದೆ. ಇಂತಹ ಸಂಕಷ್ಟದಿಂದ ಪಾರಗಲು ನಾಳಿನ ಭವಿಷ್ಯಕ್ಕೆ ಇಂದೇ ಸಸಿಯೊಂದನ್ನು ನೆಟ್ಟು ಮತ್ತೆ ಪ್ರಕೃತಿಯ ಮಡಿಲನ್ನು ಮತ್ತಷ್ಟು ಗಟ್ಟಿಗೊಳಿಸೋಣ. ಪ್ರತಿಯೊಬ್ಬರೂ ತಮ್ಮ ಮನೆಯಂಗಳ, ಗದ್ದೆ, ಹೊಲ, ಸರ್ಕಾರಿ ಜಾಗ, ಶಾಲಾ ಆವರಣ, ಗೋಮಾಳದಲ್ಲಿ ಸಸಿಗಳನ್ನು ನೆಟ್ಟು ಸಸ್ಯಸಂಕುಲದ ಸಮೃದ್ಧಿಗೆ ಮುಂದಾಗೋಣ.
ನೀವು ಸಸಿನೆಟ್ಟ ಪೋಟೋ ನಮಗೆ ವಾಟ್ಸ್‌ಪ್ ಮಾಡಿ.
ಮೊ : 9343230788.

ಮೆಟ್ರಿಕ್-ನಂತರದ ವಿದ್ಯಾರ್ಥಿವೇತನಕ್ಕಾಗಿ ಆಹ್ವಾನ

ಮಂಡ್ಯ : ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಅಲೆಮಾರಿ/ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ 2020-21ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ "ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ" "ಶುಲ್ಕ ವಿನಾಯಿತಿ" "ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ" ಮತ್ತು ನರ್ಸಿಂಗ್ ವಿದ್ಯಾರ್ಥಿಗಳಿಗೆ ಶಿಷ್ಯವೇತನ" ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಈ ಹಿಂದೆ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕವನ್ನು ಜೂನ್ 20 ರವರೆಗೆ ನಿಗದಿಪಡಿಸಲಾಗಿದ್ದು, ಹಾಗೂ ಕೋವಿಡ್-19 ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಲಾಕ್‌ಡೌನ್ ಘೋಷಣೆಯಾಗಿರುವ ಕಾರಣ ಶಾಲಾ ಕಾಲೇಜುಗಳಿಗೆ ರಜೆಯನ್ನು ಘೋಷಿಸಿರುವುದರಿಂದ ವಿದ್ಯಾರ್ಥಿಗಳು ಇ-ಅಟೆಸ್ಟೇಷನ್ ಮಾಡಿಸುವುದು ಕಷ್ಟಸಾಧ್ಯವಾಗುತ್ತದೆ. ಆದ್ದರಿಂದ ಈಗಾಗಲೇ ಎಸ್‌ಎಸ್‌ಪಿಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಪ್ರಾರಂಭಗೊಳಿಸಿದ್ದು, ಅರ್ಜಿಯನ್ನು ಪೂರ್ಣಗೊಳಿಸದ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಹಿಸುವಂತೆ (ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ) ಅರ್ಜಿಸಲ್ಲಿಸಲು ಕೊನೆಯ ದಿನಾಂಕವನ್ನು ಜುಲೈ 25 ರವರೆಗೆ ವಿಸ್ತರಿಸಲಾಗಿದೆ.

ಅರ್ಹ ವಿದ್ಯಾರ್ಥಿಗಳು www.ssp.postmetric.karnataka.gov.in. ವೆಬ್ ಸೈಟ್‌ಗೆ ಬೇಟಿ ನೀಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬುದು.

ಕಾರ್ಯಕ್ರಮಗಳ ವಿವರ, ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳು ಹಾಗೂ ವಿದ್ಯಾರ್ಥಿವೇತನಕ್ಕೆ ಸಂಬಂಧಿಸಿದ ಸರ್ಕಾರಿ ಆದೇಶಗಳ ಬಗ್ಗೆ ಮಾಹಿತಿಗಾಗಿ www.bcwd <http://www.bcwd> karnataka.gov.in ವೆಬ್ ಸೈಟ್‌ಗೆ ಬೇಟಿ ನೀಡಿ.

ಇಲಾಖಾ ಸಹಾಯವಾಣಿಗಾಗಿ ದೂ.ಸಂ. 8050770005/ 8050770004,ಇ-mail: bcwd.scholorship @karnataka.gov.in ಗೆ ಸಂಪರ್ಕಿಸಿ ಎಂದು ಮಂಡ್ಯ ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಯುವ ಜನತೆಗೆ ಕೌಶಲ್ಯ ತರಬೇತಿ ಶಾಲೆ ಮಂಜೂರು

ಕೆ.ಆರ್.ಪೇಟೆ : ತಾಲೂಕಿನ ಯುವ ಜನತೆಗೆ ಕೌಶಲ್ಯ ತರಬೇತಿ ನೀಡಲು 10ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೌಶಲ್ಯ ತರಬೇತಿ ಶಾಲೆಯನ್ನು ಮುಖ್ಯಮಂತ್ರಿ ಯಡಿಯೂರಪ್ಪ ಅವರು ಮಂಜೂರು ಮಾಡಿಕೊಟ್ಟಿದ್ದಾರೆ ಎಂದು ಕ್ರೀಡಾ, ಯುವಜನ ಸಬಲೀಕರಣ, ಸಾಂಖ್ಯಿಕ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಡಾ.ಕೆ.ಸಿ.ನಾರಾಯಣಗೌಡ ತಿಳಿಸಿದರು.

ಅವರು ತಾಲೂಕಿನ ಬೂಕನಕೆರೆ ಹೋಬಳಿ ಬಳ್ಳೇಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಖಂಡ ಯೋಗಣ್ಣ ಅವರ ತೋಟದ ಮನೆಯ ಆವರಣದಲ್ಲಿ ಆಯೋಜಿಸಿದ್ದ ಜನಸಂಪರ್ಕ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು.

ತಾಲೂಕಿನ ಸುಪುತ್ರ ಈ ರಾಜ್ಯದ ಮುಖ್ಯಮಂತ್ರಿಯಾಗಬೇಕು ಎಂಬ ಕಾರಣದಿಂದಾಗಿ ನಾನು ನನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಮತ್ತೆ ಚುನಾವಣೆ ಎದುರಿಸಿ ಬಿಜೆಪಿ ಪಕ್ಷದ ಶಾಸಕನಾಗಿ ಆಯ್ಕೆಯಾಗಿ ರಾಜ್ಯದ ಸಚಿವನಾಗಿದ್ದೇನೆ. ನಾನು ಸಚಿವನಾಗಬೇಕೆಂಬ ಆಸೆಯಿಂದ ಬಿಜೆಪಿ ಪಕ್ಷವನ್ನು ಸೇರಲಿಲ್ಲ. ತಾಲೂಕಿನ ಸಮಗ್ರವಾದ ಅಭಿವೃದ್ಧಿಯ ಕನಸನ್ನು ಕಂಡಿದ್ದ ನಾನು ಜೆಡಿಎಸ್ ಪಕ್ಷದಿಂದ ಅಭಿವೃದ್ಧಿ ಸಾಧ್ಯವಿಲ್ಲ ಎನ್ನುವುದನ್ನು ಅರಿತು ತಾಲೂಕನ್ನು ಅಭಿವೃದ್ಧಿಪಡಿಸಬೇಕು ಎಂಬ ಸದುದ್ದೇಶದಿಂದ ನಾನು ಕಠಿಣವಾದ ತೀರ್ಮಾನವನ್ನು ತೆಗೆದುಕೊಂಡು ಇಂದು ಸಚಿವನಾಗಿದ್ದೇನೆ. ಯಡಿಯೂರಪ್ಪನವರ ಆಶಯವನ್ನು ಈಡೇರಿಸುವ ತೀರ್ಮಾನವನ್ನು ನಿಮಗೋಸ್ಕರ ತೆಗೆದು ಕೊಂಡಿದ್ದೇನೆ ಎಂದು ಹೇಳಿದರು.

ಬರಪೀಡಿತ ಬೂಕನಕೆರೆ ಸಂತೇಬಾಚಹಳ್ಳಿ ಮತ್ತು ಶೀಳನೆರೆ ಹೋಬಳಿಗಳಿಗೆ ಏತನೀರಾವರಿ ಯೋಜನೆಯ ಮೂಲಕ ಕೆರೆ-ಕಟ್ಟೆಗಳನ್ನು ತುಂಬಿಸಲು ಸಹಕಾರ ನೀಡಬೇಕು ಎಂಬ ಷರತ್ತು ಹಾಕಿ ಬಿಜೆಪಿ ಪಕ್ಷವನ್ನು ಸೇರಿದ್ದೆ. ತಾಲೂಕಿನ ಜನತೆಯ ಆಶೀರ್ವಾದದ ಬಲದಿಂದ ತಾಲೂಕಿನಲ್ಲಿ ಸತತವಾಗಿ ಮೂರನೆ ಅವಧಿಗೆ ಜನರು ನನ್ನನ್ನು ನಂಬಿ ಶಾಸಕನಾಗಿ ಆಯ್ಕೆಮಾಡಿದ್ದನ್ನು ನಾನು ಜೀವನಪೂರ್ತಾ ಮರೆಯುವುದಿಲ್ಲ. ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ 6 ಖಾತೆಗಳ ಸಚಿವನಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾ ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ತಾಲೂಕಿನ ಜನತೆಗೆ ಹೆಸರು ಬರುವಂತೆ ಬದ್ಧತೆಯಿಂದ ಕೆಲಸ ಮಾಡುತ್ತಿದ್ದೇನೆ ಎಂದು ಸಚಿವ ನಾರಾಯಣಗೌಡ ಹೇಳಿದರು.

ಮನೆ ಮನೆಗೆ ತೆರಳಿ ಸಾಂತ್ವನ

ಕೋವಿಡ್ ಮಹಾಮಾರಿಗೆ ನಮ್ಮ ತಾಲೂಕಿನ ಜನರೆ ಹೆಚ್ಚಿನ ಸಂಖ್ಯೆಯಲ್ಲಿ ಸಾವನ್ನಪ್ಪಿದ್ದಾರೆ. ಇದು ನನಗೆ ಅತೀವ ದುಃಖವನ್ನು ತರಿಸಿದೆ. ಆದ್ದರಿಂದ ನನಗೆ ಯಾವುದೆ ಹಾರ ತುರಾಯಿ ಬೇಡ. ಸಾವನ್ನಪ್ಪಿರುವ ಜನರು ಯಾವುದೆ ಪಕ್ಷವಿರಲಿ ಅವರ ಮನೆ ಮನೆ ಬಾಗಿಲಿಗೆ ತೆರಳುತ್ತೇನೆ. ಸರಕಾರದಿಂದ ನೀಡಲಾಗಿರುವ 1 ಲಕ್ಷ ರೂಪಾಯಿ ಹಣದ ಜೊತೆಗೆ ನನ್ನ ತಂದೆ ತಾಯಿಗಳ ಟ್ರಸ್ಟ್‌ನ ಮೂಲಕ ನನ್ನ ಕೈಲಾದಷ್ಟು ಪರಿಹಾರವನ್ನು ನೀಡುತ್ತೇನೆ. ದಯಮಾಡಿ ಸರಕಾರದ ನಿಯಮಗಳನ್ನು ಪಾಲಿಸಿ ಕೊರೊನಾ ಮಹಾಮಾರಿಯನ್ನು ಓಡಿಸಿ. ನೆಮ್ಮದಿಯಿಂದ ಬದುಕನ್ನು ಕಟ್ಟಿಕೊಳ್ಳೋಣ ಎಂದು ಹೇಳಿದರು.

ಲಂಚದ ಹಾವಳಿ ತಪ್ಪಿಸಿ : ಜನಸಂಪರ್ಕ ಸಭೆಯಲ್ಲಿ ಮಾತನಾಡಿದ ಬಳ್ಳೇಕೆರೆ ಗ್ರಾಮ ಪಂಚಾಯಿತಿ ಸದಸ್ಯ ಹೆಮ್ಮಡಹಳ್ಳಿ ತಿಮ್ಮೇಗೌಡ ಅವರು ಮಾತನಾಡಿ ಗ್ರಾಮ ಪಂಚಾಯಿತಿಯ ನರೇಗಾ ಕಾಮಗಾರಿ ಅನುಷ್ಠಾನಕ್ಕೆ ತಾಲ್ಲೂಕು ಪಂಚಾಯಿತಿ ಅಧಿಕಾರಿಗಳು ಹಾಗೂ ಇಂಜಿನಿಯರ್‌ಗಳು ಕನಿಷ್ಠ 5, 10ರಿಂದ 20ಸಾವಿರ ರೂಗಳ ವರೆಗೆ ಲಂಚ ಪಡೆದುಕೊಳ್ಳುತ್ತಿದ್ದಾರೆ. ಇದರಿಂದ ನರೇಗಾ ಯೋಜನೆಯನ್ನು ಗ್ರಾಮ ಪಂಚಾಯಿತಿ ಸದಸ್ಯರು ಸರಿಯಾಗಿ ಅನುಷ್ಠಾನಗೊಳಿಸಲು ಸಾಧ್ಯವಾಗುತ್ತಿಲ್ಲ. ದಯಮಾಡಿ ಈ ಲಂಚದ ಹಾವಳಿಯನ್ನು ತಪ್ಪಿಸಿ ಗ್ರಾಮ ಪಂಚಾಯಿತಿಗಳನ್ನು ಉಳಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಶ್ರೀನಿವಾಸ್, ಮಂಡ್ಯ ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷ ಎಸ್.ಅಂಬರೀಶ್, ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ಉಪಾಧ್ಯಕ್ಷೆ ಪ್ರಮೀಳಾ, ಕುಮಾರ್ ಮತ್ತಿತರರಿದ್ದರು.

ಪಾಂಡವಪುರ : ಸ್ಫೋಟಕ ಪತ್ತೆ

ಪಾಂಡವಪುರ : ತಾಲೂಕಿನ ಬೇಬಿ ಬೆಟ್ಟದ ಕಲ್ಲುಗಣಿಯೊಂದರ ಬಳಿ ಅಕ್ರಮವಾಗಿ ಸಂಗ್ರಹಿಸಿ ಬೀಸಡಲಾಗಿದ್ದ ಸ್ಫೋಟಕಗಳು ಪತ್ತೆಯಾಗಿದ್ದು ಸ್ಥಳೀಯರಲ್ಲಿ ಭಾರಿ ಆತಂಕ ಸೃಷ್ಟಿಸಿವೆ.

ವಿಶ್ವವಿಖ್ಯಾತ ಕೆಆರ್‌ಎಸ್ ಅಣೆಕಟ್ಟು ಸುರಕ್ಷತೆ ಹಿತದೃಷ್ಠಿಯಿಂದಾಗಿ ಬೇಬಿ ಬೆಟ್ಟದ ಸರ್ವೆ ನಂ. 1ರ ಗಣಿಗಾರಿಕೆಯನ್ನು ಜಿಲ್ಲಾಡಳಿತ ನಿಷೇಧಿಸಿದ್ದರೂ, ಅಲ್ಲಿನ ಕಲ್ಲು ಗಣಿಯೊಂದರ ಸಮೀಪ ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ 40 ಜಿಲೆಟಿನ್ ಕಡ್ಡಿಗಳು, ಡಿಟೋನೇಟರ್, ಮೆಗ್ಗರ್ ಬ್ಲಾಸ್ಟ್‌ಗೆ ಬಳಸಲಾಗುವ ವಾಹಕಗಳು (ವೈರ್) ಪತ್ತೆಯಾಗಿವೆ.

ಕಲ್ಲು ಗಣಿ ಸುತ್ತಮುತ್ತಲಿನ ಪ್ರದೇಶದಲ್ಲಿ ಎಮ್ಮೆ, ಕುರಿ, ಮೇಕೆ, ದನಕರುಗಳನ್ನು ಮೇಯಿಸುವವರು ಈ ಸ್ಫೋಟಕಗಳು ಎಲ್ಲೆಂದರಲ್ಲಿ ಬಿದ್ದಿರುವುದನ್ನು ಕಂಡು ಅದನ್ನು ಮೊಬೈಲ್‌ನಲ್ಲಿ ಚಿತ್ರೀಕರಿಸಿ ವ್ಯಾಟ್ಸಪ್‌ನಲ್ಲಿ ವಿಡಿಯೋ ಹಾಗೂ ಫೋಟೋಸ್‌ಗಳನ್ನು ಹರಿಬಿಟ್ಟಿದ್ದಾರೆ. ಇದೀಗ ಆ ವಿಡಿಯೋಗಳು, ಫೋಟೋಸ್‌ಗಳು ವೈರಲ್ ಆಗಿವೆ.

ಸಂಸದೆ ಸುಮಲತಾ ಅಂಬರೀಶ್ ಮೊನ್ನೆಯಷ್ಟೇ ಭೇಟಿ ನೀಡಿ ಪರಿಶೀಲಿಸಿದ ಬೇಬಿ ಬೆಟ್ಟದ ಕಲ್ಲುಗಣಿ ಬಳಿಯೇ ಈ ಸ್ಫೋಟಕಗಳು ಪತ್ತೆಯಾಗಿವೆ. ಹೀಗಾಗಿ ರಾತ್ರಿ ಸಮಯದಲ್ಲೂ ಗಣಿಗಾರಿಕೆ ನಡೆಸುವ ಸಲುವಾಗಿ ಈ ಸ್ಫೋಟಕಗಳನ್ನು ಬಚ್ಚಿಡಲಾಗಿದೆ ಎಂಬ ಆರೋಪಗಳು ಕೇಳಿಬಂದಿವೆ. ಕಳೆದ ನಾಲ್ಕೈದು ದಿನಗಳಿಂದಲೂ ತಾಲೂಕಿನಲ್ಲಿ ಸತತ ಮಳೆ ಸುರಿಯುತ್ತಿರುವುದರಿಂದ ಸ್ಫೋಟಕಗಳು ಮಳೆಯಲ್ಲಿ ತೋಯ್ದಿವೆಯಾದರೂ ಎಲ್ಲ ಸ್ಫೋಟಕಗಳು ಜೀವಂತವಾಗಿವೆ ಎನ್ನಲಾಗಿದೆ.

ಸ್ಥಳೀಯರಲ್ಲಿ ಆತಂಕ : ದನ, ಕುರು, ಎಮ್ಮೆ, ಕುರಿ, ಮೇಕೆಗಳನ್ನು ಮೇಯಿಸಲು ಇಲ್ಲಿಗೆ ನಾವುಗಳು ನಿತ್ಯ ಬರುತ್ತೇವೆ. ಆಕಸ್ಮಾತ್ ಸ್ಫೋಟಕಗಳಿಗೆ ಬೀಡಿ, ಸಿಗರೇಟ್ ಸೇದಿ ಬೀಸಾಡಿ ಅದರಿಂದ ಬೆಂಕಿ ತಗುಲಿದರೆ ಅಥವಾ ಬಿಸಿಲಿನ ತಾಪಕ್ಕೆ ಸ್ಫೋಟಕಗಳು ಸ್ಫೋಟಗೊಂಡರೆ ಅನಾಹುತ ಸಂಭವಿಸಲಿವೆ ಎಂಬುದಾಗಿ ಅವರು ಆತಂಕ ವ್ಯಕ್ತಪಡಿಸಿದ್ದಾರೆ. ಜತೆಗೆ ಈ ಸ್ಫೋಟಕಗಳು ಬೇಬಿ ಬೆಟ್ಟದ ಕಲ್ಲುಗಣಿ ಪ್ರದೇಶದಲ್ಲಿ ಎಲ್ಲೆಂದರಲ್ಲಿ ಪತ್ತೆಯಾಗಿರುವ ಬಗ್ಗೆ ಸೂಕ್ತ ತನಿಖೆಯಾಗಬೇಕು ಎಂದು ಕೂಡ ಅವರುಗಳು ಒತ್ತಾಯಿಸಿದ್ದಾರೆ.

ಕ.ರಾ.ಮು.ವಿ ಪರೀಕ್ಷಾ ಶುಲ್ಕ ಪಾವತಿಗೆ ದಿನಾಂಕ ನಿಗಧಿ

ಮಂಡ್ಯ. : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ 2001-02 ರಿಂದ 2014-15 ಹಾಗೂ 2020-21 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ಸ್ನಾತಕ/ಸ್ನಾತಕೋತ್ತರ ಪದವಿಗಳಾದ ಬಿ.ಎ/ಬಿ.ಕಾಂ, ಬಿ.ಎಡ್, ಬಿ.ಎಲ್.ಐ.ಸಿ, ಎಂ.ಎ/ಎಂ.ಕಾಂ, ಎಂ.ಎಲ್.ಐ.ಎಸ್ಸಿ, ಎಲ್ಲಾ ಎಂ.ಎಸ್ಸಿ ಹಾಗೂ ಎಲ್ಲಾ ಪಿ.ಜಿ.ಡಿಪ್ಲೊಮಾ/ಡಿಪ್ಲೊಮಾ ಕಾರ್ಯಕ್ರಮಗಳ ವಿದ್ಯಾರ್ಥಿಗಳಿಗೆ ವಾರ್ಷಿಕ/ಸೆಮಿಸ್ಟರ್ ಪರೀಕ್ಷೆಗಳಿಗೆ ಪರೀಕ್ಷಾ ಶುಲ್ಕವನ್ನು ಪಾವತಿಸಲು ದಿನಾಂಕವನ್ನು ನಿಗಧಿಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ಕೇಂದ್ರ. ಮಂಡ್ಯ ದೂ.ಸಂ: 9964495936/ 9449934339ಗೆ ಸಂಪರ್ಕಿಸಬಹುದು.

ಛಲಗಾರ ಜಿ.ಮಾದೇಗೌಡರ ಜನೋಪಯೋಗಿ ಕಾಯಕ

ಮಂಡ್ಯ : 'ಮಂಡ್ಯ ಎಂದರೆ ಇಂಡಿಯಾ ಕೂಡ ನಡುಗತ್ತದೆ' ಎಂಬುದನ್ನು ಅಕ್ಷರಶ: ತಮ್ಮ ಜನಪರ ಹೋರಾಟದಿಂದ ಸಾಬೀತು ಮಾಡಿದ ಗಂಡುಗಲಿ ರಾಜಕಾರಣಿ ಜಿ.ಮಾದೇಗೌಡರು ರಾಜಕೀಯದಲ್ಲಿ ತಮ್ಮನ್ನೇ ತೊಡಗಸಿಕೊಂಡಿದ್ದರೂ ಗ್ರಾಮೀಣ ಜನರ ಸೇವೆಯನ್ನೇ ತಮ್ಮ ಜೀವನದ ಧ್ಯೇಯವನ್ನಾಗಿಸಿಕೊಂಡವರು.

ಮಂಡ್ಯ ಜಿಲ್ಲೆಯ ರಾಜಕೀಯ ಇತಿಹಾದಲ್ಲಿ ದಾಖಲೆ ಬರೆದಿರುವ ಜಿ.ಮಾದೇಗೌಡರು ಲೋಕಸಭೆ ಸದಸ್ಯರಾಗಿ, ಸಚಿವರಾಗಿ, ಶಾಸಕರಾಗಿ ಮಾಡಿರುವ ಜನೋಪಯೋಗಿ ಕಾರ್ಯಗಳು ಹತ್ತುಹಲವಾರು. ಜಿಲ್ಲೆಯ ಜನತೆಗೆ ಕರ್ನಾಟಕದ 'ಗಂಗಾ' ನದಿ ಎನಿಸಿದ ಕಾವೇರಿ ನದಿ ನೀರಿನ ರಕ್ಷಣೆಗಾಗಿ ಪಕ್ಷಭೇದ ಮರೆತು ಜನರನ್ನು ಸಂಘಟಿಸಿ ಇಡೀ ದೇಶವೆ ಗಮನಸೆಳೆಯುವ ಹೋರಾಟ ಮಾಡಿದ ಧೀಮಂತ ಹೋರಾಟಗಾರ.

ರೈತಕುಟುಂಬದಲ್ಲಿ ಹುಟ್ಟಿ ರೈತರ ಒಳ ಹೊರಗಿನ ಕಠಿಣ ಸಮಸ್ಯೆಗಳನ್ನು ಚೆನ್ನಾಗಿ ಅರಿತ ಮಾದೇಗೌಡರು ದೇಶದ ಪ್ರಧಾನಿ, ನ್ಯಾಯಾಧೀಶರು, ರಾಜಕಾರಣಿಗಳು ಅಚ್ಚರಿಯಾಗಿ ನೋಡುವಂತಹ ಸಾಧನೆಗೈದ ಛಲಗಾರ. ಭಾರತೀ ನಗರದಲ್ಲಿ ಸಕ್ಕರೆ ಕಾರ್ಖಾನೆ, ಕಾಲೇಜುಗಳ ಸ್ಥಾಪನೆಯೊಂದಿಗೆ ಜನರ ಬದುಕನ್ನು ಹಸನುಗೊಳಿಸಿದ ಸಾರ್ಥಕ ಜೀವಿ.

ಸಾಮಾಜಿಕ, ಧಾರ್ಮಿಕ, ಜನೋಪಯೋಗಿ ಸೇವೆಯಲ್ಲಿ 92 ವಸಂತಗಳನ್ನು ಪೂರೈಸಿದ ಎದೆಗಾರಿಕೆಯ ನಾಯಕ ಜಿ.ಮಾದೇಗೌಡರ ಜೊತೆಯಲ್ಲಿ ಗಣ್ಯರ ಚಿತ್ರ ನೋಟ.



ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಕೃಷ್ಣರಾಜಪೇಟೆ
ಸಂಖ್ಯೆ:ಕೃಉಮಾಸ(ಕೃ)/169/2021-2022 **ದಿನಾಂಕ:16.07.2021**

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ)

ಕೆ.ಆರ್.ಪೇಟೆ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ 2021-22 ನೇ ಸಾಲಿಗೆ ಅನ್ವಯವಾಗುವಂತೆ ಆಸ್ತಿಗಳನ್ನು ಸಂರಕ್ಷಿಸಲು **04 ಜನ ಭದ್ರತಾ ಸಿಬ್ಬಂದಿಗಳು, ಕಂಪ್ಯೂಟರ್ ಆಪರೇಟರ್ 01 ಜನ, ವಾಹನ ಚಾಲಕ 01, ಎಲೆಕ್ಟ್ರೀಷಿಯನ್ 01 ಜನ, ಒಟ್ಟು 07 ಜನರ** ಸೇವೆಯನ್ನು **ದಿನಾಂಕ: 31-05-2022 ರ ಅವಧಿಯವರೆಗೆ** ಪಾಳಿಯಲ್ಲಿ **24 ಗಂಟೆಗಳ** ಕಾಲ ಭದ್ರತಾ ಸೇವೆಗಾಗಿ ಸಮಿತಿಯ ಸ್ಥಿರ ಮತ್ತು ಚರಾಸ್ತಿಗಳ ರಕ್ಷಣೆ, ಭದ್ರತೆ, ತನಿಖಾಠಾಣೆಯಲ್ಲಿ ಸಂಚಾರ ನಿಯಂತ್ರಣ, ಕಛೇರಿ ಕಾರ್ಯನಿರ್ವಹಣೆ ಸೇರಿ ಒಟ್ಟು 07 ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಒದಗಿಸಲು ಕಾರ್ಮಿಕ ಇಲಾಖೆಯಲ್ಲಿ ಹಾಗೂ ಇಡೀ ರಾಜ್ಯದ ಅಥವಾ ಮಂಡ್ಯ ಜಿಲ್ಲೆಗೆ ಅನ್ವಯವಾಗುವಂತೆ ಡೆಪ್ಯೂಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲಿಸ್ (ಇಂಟರ್‌ನಲ್ ಸೆಕ್ಯೂರಿಟಿ ಡಿವಿಜನ್) ಬೆಂಗಳೂರು ರವರಿಂದ ಲೈಸನ್ಸ್ ಪಡೆದ (ಮಂಡ್ಯ ಜಿಲ್ಲೆ ಒಳಗೊಂಡಿರತಕ್ಕದ್ದು) ಭದ್ರತಾ ಏಜೆನ್ಸಿಗಳಿಂದ ಕನಿಷ್ಠ ವೇತನ ದರಗಳಿಗನುಗುಣವಾಗಿ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಭದ್ರತಾ ಸೇವೆ ಟೆಂಡರ್‌ಗೆ ಇ.ಎಂ.ಡಿ. **ರೂ. 50,000/-** ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ:21.08.2021 ಸಂಜೆ 5.00 ಗಂಟೆಯವರೆಗೆ,** ಟೆಂಡರ್ ತೆರೆಯುವ **ದಿನಾಂಕ: 23.08.2021 ಬೆಳಗ್ಗೆ 11.30 ಗಂಟೆಗೆ.** ಯಶಸ್ವಿಯಾದ ಗುತ್ತಿಗೆದಾರರು **1 ತಿಂಗಳ** ಗುತ್ತಿಗೆ ಮೊತ್ತವನ್ನು ಇಡುಗಂಟನ್ನಾಗಿ **(SECURITY DEPOSIT)** ಪಾವತಿಸಿ ಕಾರ್ಯಾದೇಶ ಪಡೆಯತಕ್ಕದ್ದು, ಕಾರ್ಮಿಕ ಇಲಾಖೆಯು ನಿಗಧಿಪಡಿಸಿರುವ (ಕನಿಷ್ಠ ವೇತನದಂತೆ) ಚಾಲ್ತಿಯಲ್ಲಿರುವ ಕನಿಷ್ಠ ವೇತನ ದರಗಳಿಗೆ ಅನುಗುಣವಾಗಿ ದರ ನಮೂದಿಸತಕ್ಕದ್ದು. ಇ.ಎಸ್.ಐ., ಪಿ.ಎಫ್. ಜಿ.ಎಸ್.ಟಿ., ವೃತ್ತಿ ತೆರಿಗೆ ಇಲಾಖೆಯಲ್ಲಿ ನೊಂದಾಯಿಸಿರತಕ್ಕದ್ದು. ವಿವರವಾದ ಟೆಂಡರ್ ಪ್ರಕಟಣೆಯನ್ನು ಹಾಗೂ ಟೆಂಡರ್ ಷರತ್ತು-ವಾ-ನಿಬಂಧನೆಗಳನ್ನು ವೆಬ್‌ಸೈಟ್ **http://www.eproc.karnataka.gov.in** ನಲ್ಲಿ ಅಥವಾ ಈ ಕಛೇರಿಯಿಂದ ಪಡೆಯಬಹುದು. ಇ-ಪ್ರೋಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ನೊಂದಾಯಿಸುವ ಬಗ್ಗೆ **ದೂರವಾಣಿ ಸಂಖ್ಯೆ 080-25501216/25501227** ನ್ನು ಸಂಪರ್ಕಿಸಬಹುದು

ಸಹಿ/- (ರಫೀಕ್ ಅಹಮದ್)	ಸಹಿ/- (ಮಂಜಮ್ಮ)
ಕಾರ್ಯದರ್ಶಿ,	ಅಧ್ಯಕ್ಷರು,(ಪ್ರ)
ಕೃ.ಉ.ಮಾ.ಸ., ಕೆ.ಆರ್.ಪೇಟೆ.	ಕೃ.ಉ.ಮಾ.ಸ., ಕೆ.ಆರ್.ಪೇಟೆ.

DIPR/AD-MDY/MCA/209/2021-22

Published and Owned by : Smt ARUNA JYOTHI.B.K. From No. 292, Basaveshwara Nilaya, Basaveshwara Maarga,Kaveri Nagar, Mandya Printed by : PUTTASWAMY,9th Cross, Vinoba Road,Subash Nagar, Mandya-571401, Mandya Dist. Karnataka. Editor : ARUNA JYOTHI.B.K.